## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.663/2017

| | | |
|---|---|---|
| ಸಾಕ್ಷಿದಾರರ ಹೆಸರು | ಮೊಹಮ್ಮದ್ ರಫೀಕ್ | ಸಿ.ಡಬ್ಲ್ಯು–7 |
| ತಂದೆಯ ಹೆಸರು | ಶೇಖ್ ಹುಸೇನ್ ಸಾಬರ್ | ಪಿ .ಡಬ್ಲ್ಯೂ–3 |
| ವಯಸ್ಸು | 49 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ವ್ಯಾಪಾರ | ದಿನಾಂಕಃ |
| ವಾಸಃ | ಸಾಗರ | 09.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** 1 ನೇ ಆರೋಪಿತನು ಹಾಗೂ ಚಾ.ಸಾ 1 ರವರು ಗೊತ್ತು. 2014 ನೇ ಸಾಲಿನಲ್ಲಿ ನಾನು ಸಾಗರದ ಕೆಳದಿ ರಸ್ತೆಯಲ್ಲಿರುವ ನೂರೂಲ್ ಹುದಾ ಮಸೀದಿಯ ಅಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ 1 ನೇ ಆರೋಪಿತನೊಂದಿಗೆ ಚಾ.ಸಾ 1 ರವರ ಮದುವೆಯಾಯಿತು. ನಂತರ ಅವರು ಹೇಗೆ ಇದ್ದರು ಎಂದು ನನಗೆ ಗೊತ್ತಿಲ್ಲ. ಇತರೆ ಯಾವುದೇ ಮಾಹಿತಿ ನನಗೆ ತಿಳಿದಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**2.** 2016 ನೇ ಸಾಲಿನಲ್ಲಿ ಚಾ.ಸಾ 1 ಮತ್ತು 1 ನೇ ಆರೋಪಿತನ ಕುರಿತು ತಿಳಿಯಲಾಗಿ 1 ನೇ ಆರೋಪಿತನು ಚಾ.ಸಾ 1 ರವರನ್ನು ಸುಮಾರು 2 ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು, ನಂತರ ಈ ಪ್ರಕರಣದ ಆರೋಪಿತರೆಲ್ಲರೂ ಸಣ್ಣ ಪುಟ್ಟ ವಿಚಾರಕ್ಕೆ ಚಾ.ಸಾ 1 ರವರಿಗೆ ಹೊಡೆದು, ಅವಾಚ್ಯವಾಗಿ ಬೈದ್ದು, ಹಣ ತೆಗೆದುಕೊಂಡು ಬರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುವುದಾಗಿ ತಿಳಿಯಿತು ಎಂದರೆ ಸರಿಯಲ್ಲ. ಚಾ.ಸಾ 1 ರವರು 1,45,000/– ರೂ.ಗಳನ್ನು ಸಂಘದಲ್ಲಿ ಕೈಗಡ ಸಾಲವಾಗಿ ಪಡೆದು ಸ್ವಲ್ಪ ಹಣವನ್ನು 1 ನೇ ಆರೋಪಿತನಿಗೆ ಕೊಟ್ಟಿದ್ದರೂ ಸಹ ಆರೋಪಿತರು ಚಾ.ಸಾ 1 ರವರಿಗೆ ದಿನಾಂಕ 05.03.2016 ರಂದು ಮನೆಯಿಂದ ಹೊರಹಾಕಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 04.09.2016 ರಂದು ನಾಜೀಯಾ ಬಾನು ಬಿನ್ ಸಮತ್ ಬಾಬು ಸಾಬ್, ಬಸವಪಟ್ಟಣ, ಚನ್ನಗಿರಿ ತಾಲ್ಲೂಕು ಇವರನ್ನು 1 ನೇ ಆರೋಪಿತನು ಮದುವೆ ಮಾಡಿಕೊಂಡಿರುವುದಾಗಿ ನನಗೆ ತಿಳಿದು ಬಂದಿದೆ ಎಂದು ದಿನಾಂಕ 26.11.2016 ರಂದು ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ  ಆರೋಪಿತರ ಪರ ವಕೀಲರಾದ ಶ್ರೀ. ಎಂ.ಬಿ.ಜಿ ರವರಿಂದಃ-**

**1.** ಚಾ.ಸಾ 1 ಮತ್ತು 1 ನೇ ಆರೋಪಿತನ ವಿವಾಹವು ನೂರೂಲ್ ಹುದಾ ಮಸೀದಿಯಲ್ಲಿ ನನ್ನ ಸಮಕ್ಷಮ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-6 ರ ದಾಖಲೆ ನಮ್ಮ ಮಸೀದಿಯ ಲೆಟರ್ ಹೆಡ್ ಅಲ್ಲ ಎಂದರೆ ಸರಿ. ನಿಪಿ-6 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.